# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 375

2) ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸಬೇಕಾದ ದಿನಾಂಕ : 13-08-2025

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕಾ ಸಂಬಂಧಿತ ಉದ್ಯಮಗಳಲ್ಲಿ ಎಷ್ಟು ಜನ ಉದ್ಯೋಗ ನಿರ್ವಹಿಸುತ್ತಿದ್ದಾರೆ; ಹಾಗೂ ಇಲ್ಲಿ ಎಷ್ಟು ವಾರ್ಷಿಕ ವಹಿವಾಟು ನಡೆಯುತ್ತದೆ; ಅದರಲ್ಲಿ ರಫ್ತು ವ್ಯವಹಾರ ಎಷ್ಟು; ಮೀನುಗಾರಿಕೆಯಿಂದ ಎಷ್ಟು ತೆರಿಗೆ ಮೊತ್ತ ರಾಜ್ಯ ಮತ್ತು ಕೇಂದ್ರ ಸರಕಾರಕ್ಕೆ ಸಲ್ಲಿಕೆಯಾಗುತ್ತದೆ; | ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕಾ ಸಂಬಂಧಿತ ಉದ್ಯಮಗಳಲ್ಲಿ ಸುಮಾರು 3.01 ಲಕ್ಷ ಜನರು ಉದ್ಯೋಗ ನಿರ್ವಹಿಸುತ್ತಿದ್ದಾರೆ.<br><br>2024-25ನೇ ಸಾಲಿನಲ್ಲಿ ವಾರ್ಷಿಕ ರೂ.11328.47 ಕೋಟಿಗಳಷ್ಟು ಮೌಲ್ಯದ 9,64,335 ಮೆಟ್ರಿಕ್ ಟನ್ ಮೀನು ಉತ್ಪಾದನೆಯಾಗಿರುತ್ತದೆ.<br><br>ರಾಜ್ಯವಾರು ರಫ್ತು ವ್ಯವಹಾರದ ಮಾಹಿತಿಯನ್ನು ಕೇಂದ್ರ ಸರ್ಕಾರದ ಸಂಸ್ಥೆಯಾದ Marine Products Export Development Authority (MPEDA)ಯ ಜಾಲತಾಣದಲ್ಲಿ ಕೇಂದ್ರ ಸರ್ಕಾರವು ಪ್ರಕಟಿಸುತ್ತದೆ. ಆದರೆ, 2024-25 ನೇ ಸಾಲಿನ ರಫ್ತು ವ್ಯವಹಾರದ ಮಾಹಿತಿಯನ್ನು ಇನ್ನು ಪ್ರಕಟಿಸಿರುವುದಿಲ್ಲ. 2023-24ನೇ ಸಾಲಿನಲ್ಲಿ 2.48 ಲಕ್ಷ ಮೆಟ್ರಿಕ್ ಟನ್ ರಷ್ಟು ಮೀನು + ಸೀಗಡಿ ರಫ್ತಾಗಿರುತ್ತದೆ.<br><br>ಮೀನುಗಾರಿಕೆಯು ಪ್ರಾಥಮಿಕ ವಲಯವಾದ ಕೃಷಿ ವಲಯಕ್ಕೆ ಸೇರಿದ್ದು, ತೆರಿಗೆ ವ್ಯಾಪ್ತಿಗೆ ಒಳಪಡುವುದಿಲ್ಲ. |
| ಆ) | ಕರಾವಳಿಯಲ್ಲಿ ಮೀನುಗಾರಿಕೆಗೆ ಎಷ್ಟು ಬೋಟುಗಳು ಕಾರ್ಯಾಚರಿಸುತ್ತಿವೆ; ಈವರೆಗೆ ಎಷ್ಟು ಜನ ಮೀನುಗಾರರಿಗೆ ಪರಿಹಾರ ನೀಡಲಾಗಿದೆ; ಬಾಕಿ ಇರುವ ಪ್ರಕರಣಗಳೆಷ್ಟು; ಯಾವಾಗ ನೀಡಲಾಗುವುದು; | 2024-25ನೇ ಸಾಲಿನಲ್ಲಿ ರಾಜ್ಯದ ಕರಾವಳಿಯಲ್ಲಿ ಯಾಂತ್ರಿಕೃತ, ಮೋಟರೀಕೃತ ಮತ್ತು ನಾಡದೋಣಿಗಳನ್ನು ಒಳಗೊಂಡು ಒಟ್ಟು 25,246 ಬೋಟುಗಳು ಕಾರ್ಯಾಚರಿಸುತ್ತಿವೆ.<br><br>ಪ್ರಸಕ್ತ ಸಾಲಿನಲ್ಲಿ ಮೀನುಗಾರರಿಗೆ ನೀಡಲಾದ ಪರಿಹಾರದ ವಿವರ ಕೆಳಕಂಡಂತಿದೆ:<br><br>*ಪ್ರಕರಣ* / *ವಿತರಿಸಲಾದ ಪರಿಹಾರ (ಸಂಖ್ಯೆಗಳಲ್ಲಿ)* / ಬಾಕಿ (ಸಂಖ್ಯೆಗಳಲ್ಲಿ)<br>ಮರಣ / 52 / 10<br>ದೋಣಿ / ಬಲೆ ಹಾನಿ / 24 / 12<br>ವೈದ್ಯಕೀಯ ವೆಚ್ಚ ಮರುಪಾವತಿ / 01 / 00 |
| ಇ) | ಎಷ್ಟು ಜನ ಮೀನುಗಾರರಿಗೆ ಜೀವರಕ್ಷಕ ಜಾಕೆಟ್‌ಗಳನ್ನು ಒದಗಿಸಲಾಗಿದೆ; ಬಾಕಿಯಿರುವುದೆಷ್ಟು; ಯಾವಾಗ ಒದಗಿಸಲಾಗುವುದು; | ಮೀನುಗಾರರಿಗೆ ಒದಗಿಸಲಾದ ಜೀವರಕ್ಷಕ ಜಾಕೆಟ್‌ಗಳ ವಿವರಗಳು ಕೆಳಕಂಡಂತಿದೆ:- |

| *ಪ್ರಕರಣ* | *ವಿತರಿಸಲಾದ ಪರಿಹಾರ (ಸಂಖ್ಯೆಗಳಲ್ಲಿ)* | ಬಾಕಿ (ಸಂಖ್ಯೆಗಳಲ್ಲಿ) |
|---|---|---|
| ಮರಣ | 52 | 10 |
| ದೋಣಿ / ಬಲೆ ಹಾನಿ | 24 | 12 |
| ವೈದ್ಯಕೀಯ ವೆಚ್ಚ ಮರುಪಾವತಿ | 01 | 00 |

| ವರ್ಷ | ನಿಗದಿಪಡಿಸಲಾದ ಗುರಿ (ಸಂಖ್ಯೆಗಳಲ್ಲಿ) | ವಿತರಣೆ (ಸಂಖ್ಯೆಗಳಲ್ಲಿ) | ಬಾಕಿ |
|---|---|---|---|
| 2022-23 | 355 | 355 | 0 |
| 2023-24 | 353 | 353 | 0 |
| 2024-25 | 300 | 300 | 0 |
| **ಒಟ್ಟು** | **1008** | **1008** | **0** |

| | | |
|---|---|---|
| ಈ) | ಮೀನುಗಾರರಿಗೆ ಅನುಕೂಲವಾಗುವಂತೆ ಕರಾವಳಿಯ ಕೋಡಿ ಪ್ರದೇಶಗಳಲ್ಲಿ ಹೂಳೆತ್ತಲು ಇರುವ ನಿಯಮಾವಳಿಗಳೇನು; ಬೇಡಿಕೆಯಂತೆ ಎಲ್ಲೆಲ್ಲಿ ಹೂಳೆತ್ತಲಾಗಿದೆ; ಹೂಳೆತ್ತಲು ಬಾಕಿಯಿರುವ ಪ್ರದೇಶ ಗಳಾವುವು; ಯಾವಾಗ ಹೂಳೆತ್ತಲು ಕ್ರಮ ವಹಿಸಲಾಗುವುದು? | ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |

ಸಂಖ್ಯೆ: ಪಸಂಮೀ ಇ-124 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 375ಕ್ಕೆ

## ಅನುಬಂಧ-1

ಮೀನುಗಾರರಿಗೆ ಅನುಕೂಲವಾಗುವಂತೆ ಕರಾವಳಿ ಕೋಡಿ ಪ್ರದೇಶಗಳಲ್ಲಿ ಹೂಳೆತ್ತಲು ಆದ್ಯತೆ ಮೇರೆಗೆ ಕೇಂದ್ರ ಪುರಸ್ಕೃತ ಯೋಜನೆಯಾದ ಪಿಎಂಎಂಎಸ್‌ವೈ ಮತ್ತು ರಾಜ್ಯ ಸರ್ಕಾರದ ಅನುದಾನದಿಂದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ರಾಜ್ಯದ ಮಂಗಳೂರು, ಮಲ್ಪೆ ಗಂಗೊಳ್ಳಿ, ಬಟ್ಕಳ ಮತ್ತು ಕಾರವಾರ ಮೀನುಗಾರಿಕೆ ಬಂದರುಗಳಲ್ಲಿ ಮೀನುಗಾರಿಕೆ ದೋಣಿಗಳು ಸುಗಮವಾಗಿ ಮತ್ತು ವೇಗವಾಗಿ ಚಲಿಸಲು ಅನುಕೂಲವಾಗಿಸಲು ನ್ಯಾವಿಗೇನ್ ಚಾನಲ್‌ಗಳಲ್ಲಿ ಹಂತ ಹಂತವಾಗಿ ಹೂಳೆತ್ತುವ ಕಾಮಗಾರಿಯನ್ನು ರೂ. 2000.00 ಲಕ್ಷಗಳಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ ಮೀಇಯೋ 2022 ಬೆಂಗಳೂರು, ದಿನಾಂಕ: 28.02.2023 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಅದರಂತೆ, ಸದರಿ ಹೂಳೆತ್ತುವ ಕಾಮಗಾರಿಗಳಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ಮೂಲಕ ಅನುಷ್ಠಾನಗೊಳಿಸಲಾಗಿದೆ.

ಪ್ರಸ್ತುತ ಕರಾವಳಿ ಜಿಲ್ಲೆಯ ಆಮದಳ್ಳಿ, ಬೇಲಿಕೆರೆ-ಹಾರವಾಡ ಮತ್ತು ತದಡಿ ಮೀನುಗಾರಿಕೆ ಬಂದರುಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕಾಮಗಾರಿಗಳನ್ನು ಪಿಎಂಎಂಎಸ್‌ವೈ ಯೋಜನೆಯಡಿ ರೂ. 1240.67 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ರಾಜ್ಯ ಸರ್ಕಾರದ ಅನುದಾನದಿಂದ ರಾಜ್ಯದ 15 ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿ ಹೂಳೆತ್ತುವ ಕಾಮಗಾರಿಯ ಸಂಬಂಧ ಪೂರ್ವ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. (ಕಾಮಗಾರಿಗಳ ಪಟ್ಟಿ- ಕೆಳಗಿನಂತಿದೆ). ಸದರಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಲು ಕ್ರಮವಹಿಸಲಾಗಿದೆ.

| ಕ್ರ.ಸಂ | ಕಾಮಗಾರಿಯ ಹೆಸರು |
|---|---|
| 1 | ಅಂಕೋಲ ತಾಲೂಕಿನ ಬೆಳಂಬಾರ ಮೀನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕಾಮಗಾರಿ |
| 2 | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳ್ವೆದಂಡೆಯಲ್ಲಿ ಮೀನುಗಾರಿಕಾ ಜೆಟ್ಟಿಯ ನದಿ ಪಾತ್ರದಲ್ಲಿ, ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ |
| 3 | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳ್ವೆದಂಡೆಯಲ್ಲಿ ಶಶಿಹಿತ್ಲು ನದಿಯ ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ. |
| 4 | ಹೊನ್ನಾವರ ಮೀನುಗಾರಿಕೆ ಬಂದರಿನ ವಾರ್ಫ್ ಮುಂಭಾಗದಲ್ಲಿ ಹೂಳೆತ್ತುವ ಕಾಮಗಾರಿ |
| 5 | ಹೊನ್ನಾವರ ಮೀನುಗಾರಿಕೆ ಬಂದರಿನ ಅಪ್ರೋಚ್ ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ. |
| 6 | ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕುಮಲ್ಪೆ ಬೊಬರ್ಯಪಾದೆ ಜೆಟ್ಟಿಯಿಂದ ಅಳಿವೆ ತನಕ ಹೂಳೆತ್ತಲು ಬ್ಯಾತಿಮೆಟ್ರಿಕ್ ಸರ್ವೆ ಮಾಡುವುದು. |
| 7 | ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಕೋಡಿಬೆಂಗ್ರೆ ಜೆಟ್ಟಿ ಮುಂಭಾಗ ಮತ್ತು ಅಳಿವೆಯಲ್ಲಿ ಹೂಳೆತ್ತಲು ಬ್ಯಾತಿಮೆಟ್ರಿಕ್ ಸರ್ವೆ ಮಾಡುವುದು. |
| 8 | ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಕೋಡಿಕನ್ಯಾನ ಜೆಟ್ಟಿಯಿಂದ ಅಳಿವೆ ತನಕ ಹೂಳೆತ್ತಲು ಬ್ಯಾತಿಮೆಟ್ರಿಕ್ ಸರ್ವೆ ಮಾಡುವುದು. |
| 9 | ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕು ಶಿರೂರು ಅಳಿವೆಗದ್ದೆ ಜೆಟ್ಟಿಯಿಂದ ಅಳಿವೆ ತನಕ ಹೂಳೆತ್ತಲು ಬ್ಯಾತಿಮೆಟ್ರಿಕ್ ಸರ್ವೆ ಮಾಡುವುದು. |
| 10 | ಕೊಡೇರಿ ಮೀನುಗಾರಿಕೆ ಬಂದರಿನಲ್ಲಿ (Basin, channel and Breakwater) ಹೂಳೆತ್ತುವ ಕಾಮಗಾರಿ. |
| 11 | ದಕ್ಷಿಣ ಕನ್ನಡ ಜಿಲ್ಲೆಯ ಸಸಿಹಿತ್ಲು ಮೀನುಗಾರಿಕಾ ಜೆಟ್ಟಿಯ ಮುಂಭಾಗದಲ್ಲಿ ಜಲಮೋಜಣಿ ಸರ್ವೆ ಕಾಮಗಾರಿ |
| 12 | ಮಂಗಳೂರು ತಾಲೂಕಿನ ಬೋಳೂರು ಬೊಕ್ಕಪಟ್ನ ಮೀನುಗಾರಿಕಾ ಜೆಟ್ಟಿಯ ಮುಂಭಾಗದಲ್ಲಿ ಜಲಮೋಜಣಿ ಸರ್ವೆ ಕಾಮಗಾರಿ |
| 13 | ಮಂಗಳೂರು ಹಳೆ ಬಂದರಿ ನಿಂದ ಬೋಳೂರು ಬೊಕ್ಕಪಟ್ಟ ವರೆಗೆ ಜಲಮೋಜಣಿಸರ್ವೆ ನಡೆಸುವ ಕಾಮಗಾರಿ |
| 14 | ಮಂಗಳೂರು ಮೀನುಗಾರಿಕಾ ಬಂದರಿನ ಪ್ರದೇಶದಲ್ಲಿ ಜಲಮೋಜಣಿ ಸರ್ವೆ ಕಾಮಗಾರಿ |
| 15 | ಮಂಗಳೂರು ತಾಲೂಕಿನ ಉಳ್ಳಾಲ ಕೋಟೆಪುರ ಮೀನುಗಾರಿಕಾ ಜೆಟ್ಟಿಯ ಮುಂಭಾಗದಲ್ಲಿ ಜಲಮೋಜಣಿ ಸರ್ವೆ ಕಾಮಗಾರಿ. |

**Director of Fisheries**
**Bangalore** 6/08